ಆಶ್ರಯಿಸಿದ್ದ. ತನ್ನ ಹೆಗಲಿನ ಮೇಲಿನ ಚೌಕದಿಂದ ಬೆವರನ್ನು ಒರೆಸಿಕೊಳ್ಳುತ್ತಾ ಗುಲಬರ್ಗಾದಿಂದ ಸೂರ್ಯ ತನ್ನನ್ನು ಹೀಗೆ ಹಾಸನದವರೆಗೂ ಅಟ್ಟಿಸಿಕೊಂಡು ಬರುತ್ತಾನೆ ಎಂದು ಅವನು ನಿರೀಕ್ಷಿಸಿರಲಿಲ್ಲ. ಆದರೂ ಅವನಿಗೆ ಹೊಟ್ಟೆ ಬಟ್ಟೆಗೆ ಏನೂ ಕೊರತೆಯಾಗಲಿಲ್ಲ. ಮಳೆಯಿರಲಿ ಬಿಸಿಲಿರಲಿ ಅನ್ನದಾತನಾದ ದೇವರಿಗೆ ಅವನು ಮನಸ್ಸಿನಲ್ಲಿಯೇ ಕೃತಜ್ಞತೆಯನ್ನು ಅರ್ಪಿಸುತ್ತಾನೆ.

ಹಾಗೆಯೇ ಮಾರ್ಕೆಟ್ಟಿನತ್ತ ತುಸು ದೃಷ್ಟಿ ಹಾಯಿಸಿದಾಗ ನಾಸಿರ್ ದಾಪುಗಾಲನ್ನು ಹಾಕಿಕೊಂಡು ಬರುತ್ತಿದ್ದುದನ್ನು ಕಂಡ. ಕಿವಿಗಳ ಹಿಂಭಾಗದಿಂದ ಕಿತ್ತು ಹರಿಯುತ್ತಿದ್ದ ಬೆವರಿನಿಂದ ಆವೃತ್ತನಾಗಿದ್ದ ನಾಸಿರ್ ಅವನನ್ನು ನೋಡಿದೊಡನೆಯೇ ಗಕ್ಕನೇ ನಿಂತ. ತನ್ನ ಹೆಗಲ ಮೇಲಿನಿಂದ ಚಿಕ್ಕ ಟವಲನ್ನು ಕೈಗೆತ್ತುಕೊಂಡು ಮುಖ ಕುತ್ತಿಗೆ ಎಲ್ಲವನ್ನು ಒರೆಸಿಕೊಳ್ಳುತ್ತಾ ರೆಕ್ಸಿನಿನ ಹೊಸ ಕೈಚೀಲವನ್ನು ತಳ್ಳುಗಾಡಿಯ ಮೇಲಿಟ್ಟು, "ನಿಮ್ಮ ಮಸೀದಿಯ ಅಧ್ಯಕ್ಷರನ್ನು ಈಗ ಭೇಟಿ ಮಾಡಿ ಬರುತ್ತಿದ್ದೇನೆ. ಮಗಳ ಮದುವೆ ಇದೆ ನೋಡಿ. ಇದೇ ತಿಂಗಳ ಹನ್ನೆರಡರಂದು. ಹುಡುಗ ನಿಮ್ಮ ಏರಿಯಾದವನೆ, ಘನಿ ಸಾಹೇಬರ ಮಗ... ಅದೆಲ್ಲೋ ಮೊಬೈಲ್ ಕಂಪನೀಲಿ ಕೆಲಸಕ್ಕೆ ಇದಾನಂತೆ ಬೆಂಗಳೂರಲ್ಲಿ. ಗೊತ್ತಿರಬೇಕು ನಿಮಗೂ ಕೂಡ". ಗೊತ್ತಿಲ್ಲದೇ ಏನು? ಆ ಘನಿ ಸಾಹೇಬರಿಗೆ ಇಬ್ಬರೇ ಗಂಡುಮಕ್ಕಳು. ಹಿರಿಯವನಿಗೆ ಮದುವೆಯಾಗಿ ಚಿಕ್ಕಮಗಳೂರಲ್ಲಿ ವಾಸವಾಗಿದ್ದಾನೆ. ಎರಡನೆಯವನು ಇನಾಯತ್ ಅಂತ. ಮೋಟಾರ್ ಬೈಕ್ ಬಿಟ್ಟು ಕೆಳಗೆ ಇಳಿದವನೇ ಅಲ್ಲ ಆಸಾಮಿ. ಅವನು ಬೆಂಗಳೂರಲ್ಲಿ ಯಾರನ್ನೋ ಲವ್ ಮಾಡಿಕೊಂಡು ಸುತ್ತುತ್ತಿದ್ದಾನೆ ಎಂದು ಸುದ್ದಿ ಹರಡಿತ್ತು. ಅಂಥೋನು ಹೊಳೆನರಸೀಪುರದ ಹುಡುಗೀನ ಹೆಂಗೆ ಒಪ್ಪಿಕೊಂಡ ಎಂಬ ಆಲೋಚನೆ ಸುಳಿದು ಮಾಯವಾದರೂ ಖಲಂದರ್ ಬಾಯಿಬಿಡಲಿಲ್ಲ. ಅವನು ಎಲ್ಲಾ ಸೂಕ್ಷ್ಮತೆ ಮತ್ತು ಜಾಗರೂಕತೆಯನ್ನು ಬಳಸುತ್ತಾ,

''ಅಂದ ಹಾಗೆ ನಿಮಗೆ ಮಕ್ಕಳೆಷ್ಟು?''

''ಇಬ್ಬರಿದ್ದರು. ಹಿರಿಯವನು ಮಗ. ಈಗಾ... ಐದು ವರ್ಷದ ಹಿಂದೆ ಹೊಳೆಗೆ ಇಳಿದವನು ಸುಳಿಗೆ ಸಿಕ್ಕಿ ಹಾಕಿಕೊಂಡು ಹೆಣವಾಗಿಯೇ ಮೇಲೆ ಬಂದದ್ದು...'' ಅವನ ದುಃಖ ಇನ್ನೂ ಹಸಿಹಸಿಯಾಗಿಯೇ ಇದೆ ಎಂದೆನಿಸಿತು ಖಲಂದರ್‌ಗೆ. ವಿಷಯಾಂತರ ಮಾಡುವುದು ಸೂಕ್ತ ಅನಿಸಿದ್ದರಿಂದ,

"ಮಗಳು ಏನು ಓದಿದ್ದಾಳೆ" ಎಂದು ಕೇಳಿದ. "ಅವಳು... ಅವಳು" ಎಂದು ತಡವರಿಸಿದ ನಾಸೀರ್, "ಅವಳು ಎಸ್‌ಎಸ್‌ಎಲ್‌ಸಿ ಫೇಲಾಗಿ ಮನೆಯಲ್ಲಿದ್ದಾಳೆ; ಏನೋ ವಿದ್ಯೆ ಹತ್ತಲಿಲ್ಲ. ಆದ್ರೆ ನಾನೇನು ಕಮ್ಮಿ ಮಾಡಲಿಲ್ಲ. ಹುಡುಗನಿಗೆ ಹೊಸ ಮೋಟಾರ್ ಬೈಕ್ ಕೊಡಿಸಿದೆ" ಎಂದು ಒಂದಿಷ್ಟು ತಡೆದ. "ಹುಡುಗ ತುಂಬಾ ಸ್ಟ್ಯಾಂಡರ್ಡ್ ಆಗಿದ್ದಾನೆ. ಅದಕ್ಕೆ ಜಮೀನು ಇತ್ತಲ್ಲ ಅದ್ನ ಮಾರ್ದೆ. ಏನೋ ಅಲ್ಲಾನ ಕೃಪೆ. ನೀವು ದುವಾ ಮಾಡಬೇಕು. ಮದುವೆಗೆ ಖಂಡಿತ ಬನ್ನಿ" ಎಂದು ಒತ್ತಾಯ ಪೂರ್ವಕವಾಗಿ ಆಹ್ವಾನ ನೀಡಿ ಪತ್ರಿಕೆಯನ್ನು ಅವನ ಕೈಗಿತ್ತ.

ಲಗ್ನ ಪತ್ರಿಕೆಯನ್ನು ತೆರೆದು ನೋಡಿದ ಖಲಂದರ್ ಅಲ್ಲೇ ತಟಸ್ಥನಾಗಿ ಬಿಟ್ಟ. ಮೊದಲಿಗೆ ಕನ್ನಡದಲ್ಲಿ ಅಚ್ಚಾಗಿತ್ತು. 'ಪರಮ ದಯಾಮಯನೂ ಕರುಣಾಳುವೂ ಆದ ಅಲ್ಲಾಹನ ನಾಮದಿಂದ.' ಅದೇನೋ ಸರಿ. ಮುಂದಿನ ವಾಕ್ಯವೇ ಭಾರತದ ಮಾಜಿ ಪ್ರಧಾನಿ ಶ್ರೀ ಎಚ್.ಡಿ. ದೇವೇಗೌಡ ಮತ್ತು ಶ್ರೀಮತಿ ಚೆನ್ನಮ್ಮನವರ ಕೃಪಾಶೀರ್ವಾದದಿಂದ ಎಂದು ಕಾಣಿಸಿ ಅನಂತರ ವಧೂ ಮತ್ತು ವರ, ಮತ್ತಿತರರ ಹೆಸರುಗಳು ಕಂಡುಬಂದವು. ಖಲಂದರ್‌ಗೆ ಆಶ್ಚರ್ಯದ ಮೇಲೆ ಆಶ್ಚರ್ಯ. ಮೊದಲಿಗೆ ಭಾರತದ ಮಾಜಿ ಪ್ರಧಾನ ಮಂತ್ರಿಗಳು ಆಹ್ವಾನ ನೀಡಿರುವರೆಂದರೆ ಖಂಡಿತವಾಗಿಯೂ ಅವರು ಆ ಮದುವೆಗೆ ಬರುವವರೇ ಸರಿ. ಆ ಮದುವೆ ಎಂಬುದು ಹೊಳೆನರಸೀಪುರದ ಬಹುಮುಖ್ಯ ಘಟನೆಯಾಗಲಿದೆ ಎಂಬುದು ಅವನಿಗೆ ಕ್ಷಣಾರ್ಧದಲ್ಲಿ ತಿಳಿದು ಹೋಯಿತು. ಅಂತಹ ಮದುವೆಯಲ್ಲಿ ಭಾಗವಹಿಸುವುದು ತನ್ನ ಆದ್ಯ ಕರ್ತವ್ಯ ಎಂದು ಅವನು ಭಾವಿಸಿದ. ಹಾಸನದವನಾಗಿ ಇದುವರೆಗೆ ಗೌಡರನ್ನು ಬರಿ